# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 117 |
| ಸದಸ್ಯರ ಹೆಸರು | ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | 14-2-2024 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ತಾಲ್ಲೂಕು ವಕ್ಕಲೇರಿ ಹೋಬಳಿ, ಚಲುವನಹಳ್ಳಿ ಗ್ರಾಮದ ಸ.ನಂ. 73 ಮತ್ತು 74 ರ ಕೆರೆ ಜಮೀನಿನ ಪೈಕಿ ಸುಮಾರು 40 ಎಕರೆ ಜಮೀನಿಗೆ ಪೋಡಿ ದಾಖಲೆಗಳನ್ನು ಸೃಷ್ಟಿಸಿ ಪಹಣಿ ಇಂಡೀಕರಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು) | ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ಚಲುವನಹಳ್ಳಿ ಗ್ರಾಮದ ಸ.ನಂ.73 ಆಕಾರ ಬಂದಿನಂತೆ ಒಟ್ಟು ವಿಸ್ತೀರ್ಣ 43 ಎಕರೆ 20 ಗುಂಟೆ ಇದ್ದು, ಈಗಲೂ 'ಬಿ' ಖರಾಬಿನಲ್ಲಿ ದಾಖಲಾಗಿರುತ್ತದೆ. ಸ.ನಂ.74 ಆಕಾರಬಂದಿನಂತೆ ಒಟ್ಟು ವಿಸ್ತೀರ್ಣ 37 ಎಕರೆ 27 ಗುಂಟೆ ಇದ್ದು, ಈಗಲೂ 'ಬಿ' ಖರಾಬಿನಲ್ಲಿ ದಾಖಲಾಗಿರುತ್ತದೆ. ಸ.ನಂ.73 ಮತ್ತು 74 ಗಳಲ್ಲಿ ಯಾವುದೇ ಪೋಡಿ ಆಗಿರುವುದಿಲ್ಲ. |
| ಆ) | ಸದರಿ ಸೃಷ್ಟಿತ ದಾಖಲೆಗಳನ್ನು ಸೃಷ್ಟಿಸಿ ಅಕ್ರಮವೆಸಗಿರುವ ಭೂಮಾಪನ ಇಲಾಖೆ ಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವಿರುದ್ಧ ಯಾವ ಕ್ರಮ ಕೈಗೊಳ್ಳ ಲಾಗಿದೆ; ಕೈಗೊಳ್ಳದೇ ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು; ಸದರಿ ಜಮೀನಿನ ಒತ್ತುವರಿ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮವೇನು; ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು? (ಸಂಪೂರ್ಣವಾದ ಮಾಹಿತಿ ನೀಡುವುದು) | ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ, ಚಲುವನಹಳ್ಳಿ ಗ್ರಾಮದ ರೀ ಸ.ನಂ.73 & 74 ಗಳು ಸರ್ಕಾರಿ ಜಮೀನಾಗಿದ್ದು ಆಕಾರಬಂದಿನಂತೆ ಪೂರಾ ವಿಸ್ತೀರ್ಣ 'ಬಿ' ಖರಾಬಿನಲ್ಲಿ ದಾಖಲಾಗಿರುತ್ತದೆ. ಕಾರಣ ರೀ ಸ.ನಂ.73 & 74 ಗಳ ಕುರಿತು ಯಾವುದೇ ರೀತಿಯ ಸೃಷ್ಟಿತ ದಾಖಲೆಗಳು ಇರುವುದಿಲ್ಲ ಮತ್ತು ಪ್ರಸ್ತುತ ಇವುಗಳು ಸರ್ಕಾರಿ ಜಮೀನು ಆಗಿರುತ್ತದೆ.<br><br>ಸದರಿ ಸರ್ವೆ ನಂ.73 ರಲ್ಲಿ ಅನಧಿಕೃತವಾಗಿ ನಮೂದಾಗಿರುವ ಖಾತೆಗಳನ್ನು ರದ್ದುಪಡಿಸಿ, ಒಟ್ಟು ವಿಸ್ತೀರ್ಣ 43.20 ಎಕರೆ ಜಮೀನನ್ನು ಸರ್ಕಾರಿ ಕೆರೆ ಎಂದು ಪಹಣಿಯಲ್ಲಿ ನಮೂದಿಸಲಾಗಿರುತ್ತದೆ. ಸದರಿ ಜಮೀನಿನ ಒತ್ತುವರಿಯನ್ನು ತೆರವುಗೊಳಿಸಲು ಒತ್ತುವರಿದಾರರಿಗೆ ನೋಟೀಸ್ ನೀಡಲಾಗಿರುತ್ತದೆ.<br>ಸರ್ವೆ ನಂ. 74 ರಲ್ಲಿ ಒಟ್ಟು ವಿಸ್ತೀರ್ಣ 37.27 ಎಕರೆ ಜಮೀನಿದ್ದು, ಈ ಪೈಕಿ ಮಡೇರಹಳ್ಳಿ ಕೆರೆ ಅಂಗಳ 7.23 ಎಕರೆ ವಿಸ್ತೀರ್ಣ ಎಂಆರ್ 10/1983-84 ರಂತೆ ಹಾಗೂ ಉಳಿಕೆ 30.04 ಎಕರೆ ಜಮೀನು ಎಂಆರ್ 07/2011-12 ರಂತ ಅರಣ್ಯ ಇಲಾಖೆಗೆ ಭೂ ಸ್ವಾಧೀನವಾಗಿದ್ದು, ಪಹಣಿಯಲ್ಲಿ ನಮೂದಾಗಿರುತ್ತದೆ. |

| | | |
|---|---|---|
| ಇ) | ಮಾಲೂರು ತಾಲ್ಲೂಕು ಕಸಬಾ ಹೋಬಳಿ, ತೋರ್ನಹಳ್ಳಿ ಅಗ್ರಹಾರ ಸ.ನಂ. 21 ರ ಪೈಕಿ ಸುಮಾರು 7 ಎಕರೆ ಸರ್ಕಾರಿ ಜಮೀನಿಗೆ ಭೂದಾಖಲೆಗಳ ಉಪ ನಿರ್ದೇಶಕರ ಕಛೇರಿಯಲ್ಲಿ ಭೂಗಳ್ಳರಿಗೆ ಹಕ್ಕು ಪ್ರಾಪ್ತಿಯಾಗುವಂತೆ ಆದೇಶವನ್ನು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣವಾದ ಮಾಹಿತಿ ನೀಡುವುದು) | ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ತೋರ್ನಹಳ್ಳಿ ಅಗ್ರಹಾರ ರೀ. ಸ.ನಂ.21 ರ ಪೈಕಿ ಸುಮಾರು 7.00 ಎಕರೆ ಸರ್ಕಾರಿ ಜಮೀನಿಗೆ ಭೂದಾಖಲೆಗಳ ಉಪ ನಿರ್ದೇಶಕರ ಕಛೇರಿಯಲ್ಲಿ ಭೂಗಳ್ಳರಿಗೆ ಹಕ್ಕು ಪ್ರಾಪ್ತಿಯಾಗುವಂತೆ ಆದೇಶವನ್ನು ಮಾಡಿರುವುದಿಲ್ಲ. |
| ಈ) | ಮಾಲೂರು ತಾಲ್ಲೂಕು, ಟೇಕಲ್ ಹೋಬಳಿ, ನಿದರಮಂಗಲ ಗ್ರಾಮದ ಸ.ನಂ. 155 ರ ಪೈಕಿ ಸುಮಾರು 17 ಎಕರೆ ಜಮೀನಿಗೆ ಅಕ್ರಮ ದಾಖಲೆಗಳನ್ನು ಸೃಷ್ಟಿಸಿ ಪೋಡಿ ದುರಸ್ತಿ ಕಾರ್ಯಕ್ರಮಕ್ಕೆ ಕಡತ ನಿರ್ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಭೂಮಾಪನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ವಿರುದ್ಧ ಸ್ವೀಕೃತವಾದ ದೂರುಗಳ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣವಾದ ಮಾಹಿತಿ ನೀಡುವುದು) | ಮಾಲೂರು ತಾಲ್ಲೂಕು, ಟೇಕಲ್ ಹೋಬಳಿ, ನಿದರಮಂಗಲ ಗ್ರಾಮದ ರೀ.ಸ.ನಂ.155 ರ ಪೈಕಿ ಸುಮಾರು 17.00 ಎಕರೆ ಇದ್ದು, ಈ ನಂಬರಿನಲ್ಲಿ ಭೂಮಾಪನ ಇಲಾಖೆಯಿಂದ ಯಾವುದೇ ಪೋಡಿ ದುರಸ್ತಿ ಮಾಡಿರುವುದಿಲ್ಲ. ಸದರಿ ಸರ್ವೆ ನಂಬರ್‌ನಲ್ಲಿ ಅಕ್ರಮ ದಾಖಲೆಗಳನ್ನು ಸೃಷ್ಟಿಸಿ ಪೋಡಿ ದುರಸ್ತಿ ಮಾಡಿರುವ ಕುರಿತು ಭೂಮಾಪನ ಇಲಾಖೆ ನೌಕರರ ವಿರುದ್ಧ ಯಾವುದೇ ದೂರು ಸ್ವೀಕೃತಿ ಆಗಿರುವುದಿಲ್ಲ. |

<u>**ಸಂಖ್ಯೆ: ಕಂಇ 23 ಎಸ್‌ಎಸ್‌ಸಿ 2024**</u>

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು